ಶ್ರೀ ಎನ್. ರಾಚಯ್ಯ.—ನಾನು ಕೊಟ್ಟಿರತಕ್ಕ ಹೇಳಿಕೆಯನ್ನು ಮಾನ್ಯ ಸದಸ್ಯರು ಚೆನ್ನಾಗಿ ಓದಿದರೆ ಅರ್ಥವಾಗುತ್ತದೆ. ನನಗಿನ್ನೂ ಜಾಗೃತ ಆಯೋಗದವರ ವರದಿ ಬಂದಿಲ್ಲ. ಜಾಗೃತ ಆಯೋಗದವರು ನನ್ನ ಇಲಾಖೆಯ ಅಧೀನದಲ್ಲಿರುವ ಸಂಸ್ಥೆಗಳ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದರೆ, ಅವರ ವರದಿ ನನ್ನ ಕೈಗೆ ಬರುವ ತನಕ ನಾನು ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತ ಮಾಡುವುದಿಲ್ಲ. ದಲಿತ ವಿದ್ಯಾರ್ಥಿನಿಲಯದ ವಿಚಾರದಲ್ಲಿ ಮಾತ್ರ ಅವರು ಏನು ಹೇಳಿದ್ದಾರೆ, ಅದು ಖಂಡಿತವಾಗಿಯೂ ಚೋಟ್ಟಲಿ ರಾಂಗ್ ಮತ್ತು ಬೇಸಲೆಸ್ ಎಂದು, ನಾನು ಹೇಳಿರುವುದು ನಿಜ. ಅದಕ್ಕೆ ಅಂಕಿ-ಅಂಶಗಳನ್ನು ನಾನು ಇಟ್ಟು ಕೊಂಡಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಇದ್ದಾರೆ. ಮಾನ್ಯ ಸಮಾಜ ಕಲ್ಯಾಣ ಇಲಾಖಾ ಮಂತ್ರಿಗಳು ಕೊಟ್ಟ ಹೇಳಿಕೆ ವಿರೋಧಾಭಾಸವಾಗಿದೆ. ಆದುದರಿಂದ, ಇದರಬಗ್ಗೆ ಆಖೈರು ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರೆ, ಈ ಸಭೆ ಮತ್ತು ರಾಜ್ಯದ ಜನತೆಗೆ ಸ್ವಲ್ಪ ಸಮಾಧಾನವಾಗುತ್ತದೆ. ನನ್ನ ಹೆಸರು ಮತ್ತು ನನ್ನ ತಮ್ಮನ ಹೆಸರು ಇಲ್ಲಿ ಹೇಗೆ ಬಂತು ? ಮಾನ್ಯ ಸಮಾಜ ಕಲ್ಯಾಣ ಇಲಾಖಾ ಮಂತ್ರಿಗಳು ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಸಮರ್ಥರಲ್ಲ ಮಾನ್ಯ ಮುಖ್ಯ ಮಂತಿಗಳು ಇಲ್ಲಿ ಇರುವುದರಿಂದ, ಅವರೇ ಇದರ ಬಗ್ಗೆ ಪ್ರಸ್ತಾಪ ಮಾಡಿದರೆ ಈ ರಾಜ್ಯಕ್ಕೆ ಕ್ಷೇಮ.

ಶ್ರೀ ಎನ್. ರಾಚಯ್ಯ.—ಜಾಗೃತ ಆಯೋಗದವರ ವರದಿ ಇನ್ನೂ ನನ್ನ ಕೈಗೆ ಬಂದಿಲ್ಲ. ಪತ್ರಿಕೆಯಲ್ಲಿ ಏನು ವಿಷಯ ಬಂದಿದೆ, ಅದಕ್ಕೆ ಮಾತ್ರ ಪ್ರತಿಕ್ರಿಯೆ ವ್ಯಕ್ತ ಮಾಡಿದ್ದೇನೆ.

ಶ್ರೀ ಜೆ. ಎಚ್. ಕಬಾಡಿ.—ಸ್ವಾಮಿ, ಶೇಕಡ 18ರಷ್ಟು ಖೊಸಲಟ್ಟಿರುವ ಹಣದಲ್ಲಿ, ಹರಿಜನ ಕೇರಿಗಳಲ್ಲಿ ರಸ್ತೆ ಮಾಡಲಿಕ್ಕೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಿಕ್ಕೆ, ತಾವು ಕಟ್ಟುನಿಟ್ಟಾದ ಆದೇಶವನ್ನು ಕೊಟ್ಟಿದ್ದೀರಾ ?

ಶ್ರೀ ಎನ್. ರಾಚಯ್ಯ.—ಈಗಾಗಲೇ ಆ ವಿಚಾರವನ್ನು ಹೇಳಿದ್ದೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ—ಸ್ವಾಮಿ, ಜನತಾ ಹೌಸಿಂಗ್ ಸ್ಕೀಮಿನಲ್ಲಿ ಕನಿಷ್ಟಪಕ್ಷ 500 ರೂಪಾಯಿಗಳನ್ನು ಕೊಡಬೇಕು ಎಂದು ನಿಬಂಧನೆ ಇವೆ. 500 ರೂಪಾಯಿಗಳ ಸಹಾಯವನ್ನು ತುಂಬಲಾರದಂತಹ ಬಡವರು ಇದ್ದಾರೆ. ಇಂತಹವರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ವಿನಿಯೋಟ್ಟಿರುವ 18 ಪರ್ಸೆಂಟು ಹಣದಲ್ಲಿ ಸಹಾಯಧನ ದೊರಕುವಂತೆ ಸುತ್ತೋಲೆಯನ್ನು ಕಳುಹಿಸಿದ್ದೀರಾ

ಶ್ರೀ ಎನ್. ರಾಚಯ್ಯ —ಈಗಾಗಲೇ ಸುತ್ತೋಲೆಯನ್ನು ಕಳುಹಿಸಿದ್ದೇನೆ. ಅದರಂತೆ ನಿರ್ಗತಿಕರಾದ ಬಡವರಿಗೆ 500 ರೂಪಾಯಿಗಳನ್ನು ಕೊಡುತ್ತಿದ್ದಾರೆ.

Land acquisition cases in revenue villages of Dharwar District

194. SRI B. G. BANAKAR (Hirekerur)—Will the Minister for Finance and Housing be pleased to state—.

(*a*) the total number of revenue villages in Dharwar District.

(*b*) the total No. of revenue villages wherein Govt. site is made available for siteless and houseless people in Dharwar District as on 30th June 1975.

(*c*) the total number of revenue villages wherein land acquisition cases are still pending at different stages in Dharwar District as on 30th June. 1975

(*d*) the total No. of revenue villages wherein sites are acquired and possession is given to siteless persons in the above District as on 30th June 1975.

(*e*) the total number of revenue villages wherein land acquisition proceedings or cases are not yet started in Dharwar District as on 30th June 1975 ?

SRI M. Y. GHORPADE (Minister for Finance and Housing).—

(*a*) 1,345.
(*b*) 541.
(*c*) 752.

(*d*) Nil. In 57 Land Acquisition cases, declaration under Section 3 (4) of the Act 1972 has been issued.

(*e*) 52.

ಶ್ರೀ ಬಿ.ಜಿ. ಬಣಾಕರ್.—ಸ್ವಾಮಿ, 752 ಗ್ರಾಮಗಳಲ್ಲಿ ಭೂಸ್ವಾಧೀನ ಕಾರ್ಯ ಬೇರೆ ಬೇರೆ ಹಂತದಲ್ಲಿದೆ ಎಂದು ತಿಳಿಸಿದ್ದೀರಾ ? 20 ಅಂಶಗಳ ಕಾರ್ಯಕ್ರಮದ ಮೇರೆಗೆ ಆದಷ್ಟು ತೀವ್ರವಾಗಿ ಮನೆಯಿಲ್ಲದವರಿಗೆ ನಿವೇಶನ ಕೊಡಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವೈ. ಘೋರ್ಪಡೆ —ಈಗಾಗಲೇ 541 ಗ್ರಾಮಗಳಲ್ಲಿ ನಿವೇಶನ ಹಂಚು ಕಾರ್ಯ ಪೂರ್ತಿಯಾಗಿದೆ. 752 ಗ್ರಾಮಗಳಲ್ಲಿ ಭೂಸ್ವಾಧೀನ ಮಾಡಿಕೊಳ್ಳುವ ಕಾರ್ಯ ಬೇರೆ ಬೇರೆ ಹಂತದಲ್ಲಿ ಇದೆ ನಮ್ಮ ಜಿಲ್ಲೆಯಲ್ಲಿ ನಿವೇಶನ ಹಂಚುವಿಕೆಯ ಕಾರ್ಯ ತೃಪ್ತಿಕರವಾಗಿ ನಡೆದಿದೆ. ಒಟ್ಟು 39 ಸಾವಿರ ಜನ ನಿವೇಶನ ಇಲ್ಲದೇ ಇರುವವರು ಇದ್ದಾರೆ, ಈ ಪೈಕಿ 12 ಸಾವಿರ ಜನಕ್ಕೆ ಸೈಟ್ ಹಂಚಿದ್ದೇವೆ. ಇನ್ನೂ 27 ಸಾವಿರ ಜನಕ್ಕೆ ಹಂಚಿಕೆಯಾಗಬೇಕಾಗಿದೆ. ಇದಕ್ಕೋಸ್ಕರವಾಗಿ 1 061 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ಇದರಿಂದ 21 ಸಾವಿರ ನಿವೇಶನ ದೊರೆಯುತ್ತವೆ, ಇನ್ನೂ 3-4 ತಿಂಗಳಲ್ಲಿ ಈ ಕಾರ್ಯ ಪೂರ್ತಿಯಾಗುತ್ತದೆ.

ಶ್ರೀ ಬಿ ಜಿ ಬಣಾಕರ್ —ನುಮಾರು 52 ಗ್ರಾಮಗಳಲ್ಲಿ ಭೂಸ್ವಾಧೀನ ಕಾರ್ಯ ಆಗಿಲ್ಲ ಎಂದು ಹೇಳಿದ್ದೀರಾ ಏಕೆ ?

ಶ್ರೀ ಎಂ. ವೈ. ಘೋರ್ಪಡೆ.—ನಿಮ್ಮ ಜಿಲ್ಲೆಯಲ್ಲಿ 1,345 ಗ್ರಾಮಗಳು ಇವೆ. 52 ಗ್ರಾಮಗಳಲ್ಲಿ ನೀವೇಶನ ಹಂಚಿಲ್ಲ

ಶ್ರೀ ಕೆ. ಹೆಚ್. ಪಾಟೀಲ್.—ನಿವೇಶನ ಇಲ್ಲದವರಿಗೆ ನಿವೇಶನ ಕೊಡುವ ವಿಚಾರದಲ್ಲ, ಸ್ಪೆಷಲ್ ರಾ ಆಮೆಂಡ್‌ಮಾಡಿಕೊಟ್ಟರೂ ಸಹ ಇನ್ನೂ ವಿಳಂಬವಾಗುವುದಕ್ಕೆ ಕಾರಣ ಏನು ? ತೀವ್ರಗತಿಯಿಂದ ಆಗುವುದಕ್ಕೆ ನಮಯವನ್ನು ನಿಗದಿಮಾಡುತ್ತೀರಾ ?

ಶ್ರೀ ಎಂ ವೈ. ಘೋರ್ಪಡೆ —ಅದೇ ಉದ್ದೇಶದಿಂದಲೇ ಕಾನೂನನ್ನು ಮಾರ್ಪಾಡುಮಾಡಿ 5-6 ತಿಂಗಳಲ್ಲಿ ಪೂರೈಸುವುದಕ್ಕೆ ಸಾಧ್ಯವಿದೆ. ಇಡೀ ಧಾರವಾಡಜಿಲ್ಲೆಯಲ್ಲಿ 1,061 ಎಕರೆ ಭೂಸ್ವಾಧೀನ ಮಾಡಬೇಕಾಗಿದೆ. ಅದಕ್ಕಾಗಿ ನೋಟಿಫಿಕೇಷನ್ ಇಷ್ಯೂ ಮಾಡಿದ್ದೇವೆ ನಮ್ಮ ರಾಜ್ಯದಲ್ಲಿ 7,60,000 ಜನ ಸೈಟ್ ಇದ್ದರು. ಇದರ ಪೈಕಿ 5,54,000 ಜನಕ್ಕೆ ಸೈಟ್ ಹಂಚಿದ್ದೇವೆ ಇನ್ನು 2 ಲಕ್ಷ ಜನಕ್ಕೆ ಮಾತ್ರ ಕೊಡಬೇಕಾಗಿದೆ. 12 ಸಾವಿರ ಎಕರೆಗೆ ಭೂಸ್ವಾಧೀನ ಮಾಡಿಕೊಳ್ಳುವ ಕಾರ್ಯ ಪ್ರಾರಂಭವಾಡಿದ್ದೇವೆ. ಇದರಿಂದ 2 ಲಕ್ಷ 40 ಸಾವಿರ ಸೈಟ್ ಸಿಗುತ್ತದೆ. ಒಟ್ಟಿನಲ್ಲಿ ಆದಷ್ಟು ಜಾಗ್ರತೆ ಈ ಕಾರ್ಯವನ್ನು ಮುಗಿಸುತ್ತೇವೆ.

ಶ್ರೀ ಕೆ. ಹೆಚ್.—ಪಾಟೀಲ್.—ಎರಡು ತಿಂಗಳೊಳಗೆ ಮುಗಿಸಬೇಕೆಂದು ಕಾನೂನು ಮಾರ್ಪಾಡು ಮಾಡಿದ್ದರೂ, ಇಷ್ಟು ದಿವನ ಪೆಂಡಿಂಗ್ ಇಟ್ಟಿರುವ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಎರಡು ದಿನಗಳಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ನಾವು ಆಳವಾಗಿ ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಬಹುಶಃ 5–6 ದಿನಗಳಲ್ಲಿ ಪೂರ್ತಿಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅಕ್ಸಿಜಿಷನ್ ಪ್ರೊಸೀಡಿಂಗ್ಸ್ ಮುಗಿಸುವುದಕ್ಕೆ ಕಾಲಬೇಕಾಗುತ್ತದೆಂದು ಹೇಳಿದಿರಿ? ಈ ವಿಚಾರವಾಗಿ ಹಲವಾರು ಬಾರಿ ಇದೇ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಈಗ ಇರತಕ್ಕ ಕಾನೂನು ಪ್ರಕಾರ ಬಹಳ ತೊಂದರೆ ಇದೆ, ಭೂಸ್ವಾದೀನ ಕಾನೂನು ಏನು ಇದೆ, ಅದನ್ನೇ ಮಾರ್ಪಾಡುಮಾಡಿ ತರುವುದಕ್ಕೆ ಸಾಧ್ಯವೆ?

ಶ್ರೀ ಎಂ. ವೈ. ಘೋರ್ಪಡೆ.—ಸ್ವಾಮಿ, ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇನೆ. ಅಕ್ಸಿಜಿಷನ್ ಮಾಡಬೇಕಾದರೆ ಒಂದು ವರ್ಷದಲ್ಲಿ ಆಗುವುದು 10 ವರ್ಷ ಬೇಕಾಗುತ್ತದೆ. ಕಾನೂನನ್ನು ಮಾರ್ಪಾಡು ಮಾಡಿ, 6 ತಿಂಗಳಲ್ಲಿ ಅಕ್ವೈರ್ ಮಾಡಿದರೆ ಅದು ಪ್ರಗತಿಪರವಾದ ಹೆಜ್ಜೆ ಎಂದು ಒಪ್ಪಬೇಕಾಗುತ್ತದೆ ಸರ್ವೆ ನಂ. ಅಕ್ವೈರ್ ಮಾಡುವಾಗ ಮುಂಚಿತವಾಗಿ ನೋಟೀಸ್ ಕೊಡಬೇಕಾಗುತ್ತದೆ. ಅವರ ತಕರಾರುಗಳು ಇದ್ದು, ಅವರಿಂದ ಅಬೆಜಕ್ಷನ್ ಇದ್ದು ಅದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಇದರ ಅಧಿಕಾರವನ್ನು ಸಂಪೂರ್ಣವಾಗಿ ಜಿಲ್ಲಾ ಮಟ್ಟಕ್ಕೆ ಹಂಚಿಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ಇದೆ. ಅವರು ತೀರ್ಮಾನಕೊಟ್ಟ ನಂತರ ಯಾರೂ ಅದರ ಬಗ್ಗೆ ಅಬ್‌ಜಕ್ಷನ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ — ಮಾನ್ಯ ಹಣಕಾಸಿನ ಮಂತ್ರಿಗಳು ಈಗ ತಾನೇ ಏನು ವಿವರ ಹೇಳಿದರು ಅದನ್ನು ಕೇಳಿದ್ದೇನೆ. ಅದರಲ್ಲಿ ಎರಡು ಅಕ್ಸಿಸಿಷನ್ ಆಕ್ಟ್ ಇದೆ. ಒಂದು ಜನರಲ್ ಅಕ್ಸಿಸಿಷನ್ ಆಕ್ಟ್, ಇನ್ನೊಂದು ಸ್ಪೆಷರ್ ಅಕ್ಸಿಸಿಷನ್ ಆಕ್ಟ್ ಅಂತ ಇದೆ. ಅವರು ಈಗ ಏನು ವಿವರ ಹೇಳಿದರು ಅದು ಜನರಲ್ ಅಕ್ಸಿಸಿಷನ್ ಆಕ್ಟ್‌ಗೆ ಸಂಬಂಧಪಟ್ಟದ್ದು. ನಾನು ಕೇಳುವುದು ಸೈಟು ಅಕ್ವೈರ್ ಮಾಡುವುದಕ್ಕೋಸ್ಕರ 90 ದಿವಸದಲ್ಲಿ ಸೈಟು ಅಕ್ವೈರ್ ಮಾಡಿಕೊಳ್ಳಬೇಕು ಅಂತ ಏನು ಒಂದು ಸ್ಪೆಷಲ್ ಆಕ್ಟ್ ಮಾಡಿದ್ದೇವೆ ಆ ಪ್ರಕಾರ ಮಾನ್ಯ ಮಂತ್ರಿಗಳು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ಹೇಳುತ್ತಿರಾ?

ಶ್ರೀ ಎಂ. ವೈ. ಘೋರ್ಪಡೆ. – ಆ ಆಕ್ಟ್‌ನಲ್ಲಿ ಏನಿದೆ ಅದರ ಪ್ರಕಾರ ಮಾಡುತ್ತಿದಾರೆ.

ಶ್ರೀ ಟಿ. ಎಂ. ಮಂಜುನಾಥ.— ಈಗ ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ. ಈ ಬಗ್ಗೆ ನಾನು ಒಂದು ಸಲಹೆ ಹೇಳುವುದನ್ನು ಒಪ್ಪಬೇಕು. ಯಾವುದಾದರೂ ಸೈಟನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ಆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇಕು. ಎಷ್ಟೋ ಸ್ಥಳಗಳಲ್ಲಿ ಸೈಟ್‌ಲೆಸ್‌ಗೆ ಅಂತ ಅಪ್ಲಿಕೇಷನ್ನೇ ಬರುವುದಿಲ್ಲ ಅಂಥಾ ಸ್ಥಳಗಳಲ್ಲಿ ತೆಂಗಿನ ಗಿಡ ಹಾಕಿದ್ದಾರೆ, ಪೊದೆ ಇರುತ್ತದೆ. ಅಂಥಾ ಕಡೆ ಸರಿಯಾಗಿ ಪರಿಶೀಲನೆ ಮಾಡದೆ ಸೈಟ್ ಅಕ್ವೈರ್ ಮಾಡಿಕೊಳ್ಳಬೇಕು ಅಂತ ಮಾಡುತ್ತಾರೆ. ಇದಂರಿದ ಎಷ್ಟೋ ಜನ ನಿರಪರಾದಿಗಳಿಗೆ ಅನ್ಯಾಯವಾಗಿದೆ. ಇದನ್ನು ಸರಿಪಡಿಸುತ್ತಿರಾ?

ಶ್ರೀ ಎಂ. ವೈ. ಘೋರ್ಪಡೆ —ಈ ಕೆಲಸವನ್ನು ಬಹಳ ನಿಷ್ಪಕ್ಷಪಾತವಾಗಿ ಮಾಡುತ್ತಿದ್ದಾರೆ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೋತ್ತರ ಹೇಳಿ ಮುಗಿಯಿತು.

SPEAKER'S REPORT

MADAM SPEAKER.— I lay on the Table a copy of the Address delivered by the Governor on 2nd February 1976.

The Address of the Governor on 2nd February 1976 is reproduced below.—

HONOURABLE MEMBERS OF THE LEGISLATURE.

I have great pleasure in welcoming you to this session of the State Legislature.